# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 217/2025**

**CW 19**

**PW7**

| | | |
|---|---|---|
| ಸಾಕ್ಷಿಯ ಹೆಸರು | ಃ | ವಿಜಯ ಸಿ. |
| ತಂದೆ ಹೆಸರು | ಃ | ಗಂಗಾಧರ ಸಿ. |
| ಪ್ರಾಯ | ಃ | 55 ವರ್ಷ |
| ಉದ್ಯೋಗ | ಃ | ಎ.ಎಸ್.ಐ. ಉಡುಪಿ ನಗರ ಪೋಲೀಸ್ ಠಾಣೆ |
| ವಾಸ | ಃ | ಉಡುಪಿ. |

ದಿನಾಂಕ : **27.03.2026** ರಂದು ಪಿಡಬ್ಲ್ಯೂ - 7 / ಸಿಡಬ್ಲ್ಯೂ - 19 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು 2024 ರಿಂದ 2025 ರವರೆಗೆ ಅಜೆಕಾರು ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಕೆಲಸ ನಿರ್ವಹಿಸಿದ್ದೇನೆ. ದಿಃ 01.04.2025 ರಂದು ನನಗೆ ಪಿ.ಎಸ್.ಐ. ರವರು ಸಂಜೆ 6.15 ರ ಸಮಯದಲ್ಲಿ ನೀಡಿದ ನಿರ್ದೇಶನದಂತೆ ನಾನು ಸರಕಾರಿ ಆಸ್ಪತ್ರೆಗೆ ತೆರಳಿ, ಮೃತ ಜಯಲಕ್ಷ್ಮಿ ಯವರ ಶವ ತನಿಖೆಯನ್ನು ಚಾಸಾ 6 ರಿಂದ

ಚಾಸಾ 8 ರವರ ಸಮಕ್ಷಮ ನಡೆಸಿರುತ್ತೇನೆ. ಸದರಿ ಶವ ತನಿಖಾ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ - 14 ಎಂದು ಗುರುತಿಸಲಾಯಿತು. ಅದರಲ್ಲಿನ ನನ್ನ ಸಹಿಯನ್ನು ನಿಪಿ - 14(ಎ) ಎಂದು ಗುರುತಿಸಲಾಯಿತು. ಅದರ ಜೊತೆ ತೆಗೆದಂತಹ ಭಾವಚಿತ್ರವನ್ನು ನಿಪಿ - 15 ಎಂದು , ಅದರಲ್ಲಿನ ನನ್ನ ಸಹಿಯನ್ನು ನಿಪಿ - 15(ಎ) ಎಂದು ಗುರುತಿಸಲಾಯಿತು. ನಂತರ ಚಾಸಾ 1 ರಿಂದ ಚಾಸಾ 3 ರವರ ಮರುಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ 1 ರಿಂದ ಚಾಸಾ 3 ರವರು ಕ್ರಮವಾಗಿ ನಿಪಿ - 2, 9 ಮತ್ತು ನಿಪಿ - 4 ರಂತೆ ನನ್ನ ಮುಂದೆ ಮರುಹೇಳಿಕೆಗಳನ್ನು ನೀಡಿರುತ್ತಾರೆ. ಮುಂದಿನ ತನಿಖೆಯನ್ನು ಚಾಸಾ 20 ರವರಿಗೆ ವಹಿಸಿರುತ್ತೇನೆ.

<u>ಪಾಟೀ ಸವಾಲುಃ</u> ಶ್ರೀ ಕೆ.ಹೆಚ್.ಎ. ಆರೋಪಿ ಪರ ವಕೀಲರಿಂದಃ

ಚಾಸಾ 6 ರಿಂದ ಚಾಸಾ 8 ರವರ ಸಮಕ್ಷಮ ನಾನು ಶವ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರಿಂದ 3 ರವರ ಮರುಹೇಳಿಕೆಯನ್ನು ಅವರು ನೀಡಿರುವುದಿಲ್ಲ ಮತ್ತು ನಾನು ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗಿ ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**CC 217/2025**
**CW19**
**PW7**

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.